ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 231/2023

| | | |
|---|---|---|
| ಹೆಸರು | - | ಅಭೀದಾ ಬೇಗಂ |
| ತಂದೆಯ ಹೆಸರು | - | ಮುನ್ವರ |
| ವಯಸ್ಸು | - | 45 ವರ್ಷ |
| ಉದ್ಯೋಗ | - | ವ್ಯವಹಾರ ವ ಗೃಹಿಣಿ |
| ವಾಸ್ತವ್ಯ | - | ಗೋಪಾಲಗೌಡ ನಗರ, ಸಾಗರ, ಶಿವಮೊಗ್ಗ |

– ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೆಚ್ಚುವರಿ ಹೇಳಿಕೆ –

ಪ್ರಶ್ನೆ - 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದು ಕೊಂಡಿದ್ದೀರಾ?

ಉತ್ತರ -

**ಪ್ರಶ್ನೆ - 2** ಪಿ ಡಬ್ಲ್ಯೂ 1 - ಗಣೇಶ ಶೇಖರ ನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ , ಅವರು ಮತ್ತು ನೀವು ಬಹಳ ವರ್ಷಗಳಿಂದ ಪರಿಚಯಸ್ಥರಿದ್ದು , ಹೀಗಿರುತ್ತೀರುವಲ್ಲಿ ನೀವು ಅವರ ಪರಿಚಯನಾತೆಯಿಂದ ಅವರ ಬಳಿಗೆ ಬಂದು ನಿಮ್ಮ ಅನಾರೋಗ್ಯದ ಸಂಬಂಧ ಚಿಕಿತ್ಸೆ ಪಡೆಯುವ ಸಲುವಾಗಿ ಹಾಗೂ ಮನೆ ಕಟ್ಟುವ ಸಲುವಾಗಿ ತುರ್ತಾಗಿ ರಖಂ ರೂ . 1,10,000/- ಹಣದ ಅವಶ್ಯಕತೆ ಇದೆ , ಸದ್ರಿ ಹಣವನ್ನು 5-6 ತಿಂಗಳು ಕಳೆದ ಬಳಿಕ ವಾಪಸ್ಸು ಕೊಡುತ್ತೇನೆ ಎಂತಾ ನಂಬಿಕೆ ಮತ್ತು ವಿಶ್ವಾಸವನ್ನು ನೀಡಿ ಪರಿಪರಿಯಾಗಿ ಕೇಳಿಕೊಂಡಿದ್ದಕ್ಕೆ ಅವರು ನಿಮ್ಮೊಂದಿಗಿನ ಪರಿಚಯ ನಾತೆಯಿಂದ ನಿಮಗೆ 2019 ನೇ ಇಸವಿ ಜನೇವರಿ ತಿಂಗಳ 3 ನೇ ವಾರದಂದು ರೂ . 1,10,000/- ಹಣವನ್ನು ಕೈಗಡವಾಗಿ ನಗದಾಗಿ ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ- 3** ಪಿಡಬ್ಲ್ಯೂ 1 – ಇವರು ಮುಂದುವರಿದು, ತದನಂತರ ಅವರು 6 ತಿಂಗಳು ಕಳೆದ ಬಳಿಕ ನಿಮ್ಮ ಬಳಿ ಬಂದು ಅವರು ನೀಡಿದ ಹಣವನ್ನು ವಾಪಸ್ಸು ನೀಡುವಂತೆ ಕೇಳಲು ಹೋದಾಗ ನೀವು ನಿಮ್ಮ ಬಳಿ ಸಧ್ಯಕ್ಕೆ ನಿಮ್ಮ ಹತ್ತಿರ ನಗದು ಹಣ ಇಲ್ಲ , ಅವರ ಖಾತೆ ಇರುವ ಕಾರ್ಪೊರೇಷನ್ ಬ್ಯಾಂಕ ಸಾಗರ ಶಾಖೆ , ಸಾಗರ ಇದರಲ್ಲಿ ಸಾಕಷ್ಟು ಹಣ ಇದೆ , ಅಲ್ಲಿ ನಗದಿಕರಿಸಿಕೊಳ್ಳಿ ಎಂಬ ಭರವಸೆ ನೀಡಿ ಒಂದು ಚೆಕ್ ನ್ನು ರೂ . 1,10,000/- ಕ್ಕೆ ದಿಃ 25-07-2019 ಎಂದು ನಮೂದಿಸಿ ಸಹಿ ಮಾಡಿ ನೀಡಿದ್ದ , ಸದರಿ ಚೆಕ್ ನಂ. 392883 ಆಗಿರುತ್ತದೆ ಎಂದು ಹೇಳಿರುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ- 4** ಪಿಡಬ್ಲ್ಯೂ 1 – ಇವರು ಮುಂದುವರಿದು, ಅವರು ನಿಮಗೆ ದಿಃ 07-08-2019 ರಂದು ರಜಿಸ್ಟರ್ಡ ಲೀಗಲ್ ನೋಟಿಸನ್ನು ಈ ಪ್ರಕರಣದ ಕುರಿತು ನೀಡಿದ್ದ , ಅವರು ನಿಮ್ಮ ಮೇಲಿನ ವಿಶ್ವಾಸದಿಂದ ಸದರಿ ಚೆಕ್ ನ್ನು ಸ್ವೀಕರಿಸಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ- 5** ಪಿಡಬ್ಲ್ಯೂ 1 – ಇವರು ಮುಂದುವರಿದು, ಈ ಚೆಕ್ ನ್ನು ನೀಡುವ ವೇಳೆಯಲ್ಲಿ ನೀವು ಚೆಕ್ ನ ಮೇಲೆ ನಮೂದಿಸಿದ ದಿನಾಂಕದಂದು ಖಾತೆಯಲ್ಲಿ ನಗದೀಕರಣಕ್ಕೆ ಸಾಕಾಗುವಷ್ಟು ಹಣ ಜಮಾ ಇಡುವುದಾಗಿ ಭರವಸೆ ಸಹ ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ- 6** ಪಿಡಬ್ಲ್ಯೂ 1 – ಇವರು ಮುಂದುವರಿದು , ಹೀಗಿರುತ್ತಾ ಅವರು ನಿಮ್ಮಿಂದ ಸಂದಾಯವಾಗತಕ್ಕ ಹಣವನ್ನು ಪಡೆದುಕೊಳ್ಳುವ ಸಲುವಾಗಿ ಅವರು ಸರಿ ಚೆಕ್ ನ್ನು ಅವರ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕುಮಟಾ ಶಾಖೆಯಲ್ಲಿ ನಗದೀಕರಣಕ್ಕೆ

ಎಂತಾ ಹಾಜರು ಪಡಿಸಿದಾಗ ಸದ್ರಿ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂತಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕುಮಟಾ ಶಾಖೆಯವರು ಫಂಡ್ಸ್ ಇನ್ ಸಫೀಷಿಯಂಟ್ ಎಂಬ ಹಿಂಬರಹದೊಂದಿಗೆ ಚೆಕ್ ನ್ನು ಮೆಮೊದೊಂದಿಗೆ ದಿಃ 26-07-2019 ರಂದು ಹಿಂದಿರುಗಿಸಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

<u>**ಪ್ರಶ್ನೆ– 7**</u> ಪಿಡಬ್ಲ್ಯೂ 1 – ಇವರು ಮುಂದುವರಿದು, ತದನಂತರ ಅವರು ತಮ್ಮ ವಕೀಲರ ಮುಖಾಂತರ ನಿಮಗೆ, ನೀವು ನೀಡಿದ ಚೆಕ್ ನಗದೀಕರಣವಾಗದೇ ಫಂಡ್ಸ್ ಇನ್ ಸಫೀಷಿಯಂಟ್ ಎಂಬ ಹಿಂಬರಹದೊಂದಿಗೆ ದಿಃ 26-07-2019 ರಂದು ಚೆಕ್ ವಾಪಸ್ಸು ಬಂದಿರುವುದೆಂತಲೂ, ಚೆಕ್ ನಲ್ಲಿ ನಮೂದು ಮಾಡಿದ ಹಣವನ್ನು ವಾಪಸ್ಸು ಕೊಡುವಂತೆಯೂ ನೊಂದಾಯಿತ ಅಂಚೆಯ ಮೂಲಕ ನಿಮ್ಮ ಮನೆಯ ವಿಳಾಸಕ್ಕೆ ದಿಃ 07-08-2019 ರಂದು ನೋಟಿಸು ನೀಡಿ ತಿಳಿಸಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

<u>**ಪ್ರಶ್ನೆ – 8**</u> ಪಿ ಡಬ್ಲ್ಯೂ 1 – ರವರು ಮುಂದುವರೆದು , ನಿಮಗೆ ನೋಟಿಸು ದಿಃ 10-08-2019 ರಂದು ಜಾರಿಯಾಗಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

<u>**ಪ್ರಶ್ನೆ– 9**</u> ಪಿಡಬ್ಲ್ಯೂ 1 – ಇವರು ಮುಂದುವರಿದು, ಸದ್ರಿ ನೋಟಿಸಿಗೆ ನೀವು ಯಾವುದೇ ಉತ್ತರ ನೀಡಿದ್ದಾಗಲೀ, ಚೆಕ್ ನಲ್ಲಿ ನಮೂದಿಸಿದ ಹಣವನ್ನು ಮರಳಿಸಿದ್ದಾಗಲೀ ಇರುವುದಿಲ್ಲ , ನೀವು ಅವರಿಂದ ಪಡೆದುಕೊಂಡ ಹಣವನ್ನು ಈವರೆಗೂ ಹಿಂದಿರುಗಿಸದೇ ಬಾಕಿ ಇಟ್ಟುಕೊಂಡಿದ್ದು ಸದ್ರಿ ಬಾಕಿ ಇಟ್ಟುಕೊಂಡ ಹಣದ ಮರುಪಾವತಿಗಾಗಿ ನೋಟಿಸಿನಲ್ಲಿ ಹೇಳಿದ ಚೆಕ್ ನ್ನು ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**ಪ್ರಶ್ನೆ– 10** ಪಿಡಬ್ಲ್ಯೂ 1 – ಇವರು ಮುಂದುವರಿದು, ನೀವು ಅವರಿಗಗೆ ಮೋಸ ಪಡಿಸುವ ದುರುದ್ದೇಶದಿಂದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂತಾ ಗೊತ್ತಿರುತ್ತಾ ಬುದ್ಧ್ಯಾ ಬೋಗಸ್ ಚೆಕ್ ನ್ನು ನೀಡಿ ಮಾತಿನಂತೆ ಖಾತೆಯಲ್ಲಿ ಹಣ ಜಮಾ ಇಡದೇ ಅವರಿಗೆ ಮೋಸ ಪಡಿಸಿರುತ್ತೀರಿ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 11** ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರ –

**ಪ್ರಶ್ನೆ – 12** ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 22-01-2026

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ